**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ/30/ಡಿಇಕ್ಯೂ (1)/2012

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ:16-03-2013

ಇವರಿಗೆ,

ಪ್ರಿನ್ಸಿಪಾಲರು,
ಕೆ.ಎಲ್.ಇ. ಪಾಲಿಟೆಕ್ನಿಕ್,
ಮಹಾಲಿಂಗಪುರ.

ಮಾನ್ಯರೆ,

ವಿಷಯ: ಶ್ರೀ ಎಸ್.ಎಸ್. ಹಿರೇಮಠ, ಉಪನ್ಯಾಸಕರು, ವಿಜ್ಞಾನ ವಿಭಾಗ, ಕೆ.ಎಲ್.ಇ. ಪಾಲಿಟೆಕ್ನಿಕ್, ಮಹಾಲಿಂಗಪುರ ಇವರು 2012ರ ಡಿಪ್ಲೊಮಾ ಪರೀಕ್ಷೆಯಲ್ಲಿ ಅಸಮರ್ಪಕ ಮೌಲ್ಯಮಾಪನ ಮಾಡಿರುವುದರಿಂದ ಮತ್ತು ಕರ್ತವ್ಯ ನಿರ್ಲಕ್ಷತೆ ಎಸಗಿರುವುದರಿಂದ ಅವರನ್ನು ಸೇವೆಯಿಂದ ವಜಾಗೊಳಿಸುವ ಬಗ್ಗೆ.

ಉಲ್ಲೇಖ: 1. ಮಾನ್ಯ ಉನ್ನತ ಶಿಕ್ಷಣ ಸಚಿವರ ಟಿಪ್ಪಣಿ ಪತ್ರ ದಿ: 12-03-2013
2. ಪೂರ್ವಭಾವಿ ಇಲಾಖಾ ವಿಚಾರಣೆ ನಡೆಸಲು ನೇಮಿಸಲಾದ ಜ್ಞಾಪನ ಪತ್ರ ದಿ: 12-3-2013
3. ಕಾರ್ಯದರ್ಶಿಯವರು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಇವರ ಪೂರ್ವಭಾವಿ ವಿಚಾರಣಾ ವರದಿ ದಿನಾಂಕ: 16-03-2013

* * * *

ಮಾನ್ಯರೆ,

ಎಸ್‌ಜೆ ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು ಇಲ್ಲಿ ವ್ಯಾಸಂಗ ಮಾಡುತ್ತಿರುವ ಕೆಲವು ವಿದ್ಯಾರ್ಥಿಗಳು ಪರೀಕ್ಷೆ ಪೋಟೋ ಪ್ರತಿಗಳನ್ನು ಪಡೆದಿದ್ದು, ಮೌಲ್ಯಮಾಪನದಲ್ಲಿನ ದೋಷದಿಂದಾಗಿ ಸೊನ್ನೆ ಅಂಕ ಬಂದಿರುತ್ತದೆ ಎಂದು ದೂರು ಸಲ್ಲಿಸಿರುತ್ತಾರೆ. ಈ ಪ್ರಕರಣವು ದಿನಾಂಕ: 12-03-2013 ರಂದು ಟಿವಿ 9 ಮತ್ತು ಸಮಯ ಮಾಧ್ಯಮಗಳಲ್ಲಿ ಪ್ರಸಾರಗೊಂಡಿರುತ್ತದೆ ಮತ್ತು ದಿನಾಂಕ: 13-03-2013 ರಂದು ಕನ್ನಡ ದಿನಪತ್ರಿಕೆಗಳಾದ ಪ್ರಜಾವಾಣಿ, ವಿಜಯಕರ್ನಾಟಕ ದಲ್ಲಿಯೂ ಪ್ರಕಟಗೊಂಡಿರುತ್ತದೆ. ಉಲ್ಲೇಖ (1)ರಲ್ಲಿ ಕಾಣಿಸಿರುವ ಟಿಪ್ಪಣಿ ಪತ್ರ ದಿನಾಂಕ: 12-03-2013 ರಲ್ಲಿ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ 02 ದಿನಗಳೊಳಗೆ ತನಿಖೆ ನಡೆಸಿ ವರದಿ ಸಲ್ಲಿಸಲು ಮಾನ್ಯ ಉನ್ನತ ಶಿಕ್ಷಣ ಸಚಿವರು ಸೂಚಿಸಿದ್ದರಿಂದ, ಉಲ್ಲೇಖ(2)ರಲ್ಲಿನ ಜ್ಞಾಪನದಲ್ಲಿ ಪೂರ್ವಭಾವಿ ತನಿಖೆ ನಡೆಸಲು ಶ್ರೀ ಆನಂದ ಪೂಜಾರಿ, ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ ಇವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯವರು ಪೂರ್ವಭಾವಿ ವಿಚಾರಣೆ ನಡೆಸಿ ದಿನಾಂಕ: 16-03-2013 ರಂದು ವರದಿ ಸಲ್ಲಿಸಿರುತಾರೆ. ಈ ವರದಿಯನ್ನು ಪರಿಶೀಲಿಸಿದಾಗ 2012ರ ನವೆಂಬರ್-ಡಿಸೆಂಬರ್ ಸೆಮಿಸ್ಟರ್ ಡಿಪ್ಲೊಮಾ ಪರೀಕ್ಷಾ ಮೌಲ್ಯಮಾಪನ ಕಾರ್ಯಗಳ ಸಂಬಂಧ ಅಪ್ಲೈಡ್ ಮ್ಯಾಥಮೆಟಿಕ್ಸ್ – II (9SC02M) ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಹುಬ್ಬಳ್ಳಿ ಮೌಲ್ಯಮಾಪನ ಕೇಂದ್ರದಲ್ಲಿ ಕೆ.ಎಲ್.ಇ

ಪಾಲಿಟೆಕ್ನಿಕ್, ಮಹಾಲಿಂಗಪುರ ಇಲ್ಲಿನ ವಿಜ್ಞಾನ ಉಪನ್ಯಾಸಕರಾದ ಶ್ರೀ ಎಸ್.ಎಸ್.ಹಿರೇಮಠ ಇವರ ಅಸಮರ್ಪಕ/ Erratic ನಿರ್ಲಕ್ಷ್ಯದಿಂದ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿರುತ್ತಾರೆ.

ಶ್ರೀ ಎಸ್.ಎಸ್.ಹಿರೇಮಠ್, ಇವರು ಮೌಲ್ಯಮಾಪನ ಮಾಡಿದ ಉತ್ತರ ಪತ್ರಿಕೆಗಳನ್ನು ಮರು ಮೌಲ್ಯಮಾಪನ ಮಾಡಿದ ನಂತರ ಸೊನ್ನೆ ನೀಡಿದ ಉತ್ತರ ಪತ್ತಿಕೆಗಳಲ್ಲಿ ಅಂಕಗಳು ವ್ಯತ್ಯಾಸಗೊಂಡಿರುತ್ತದೆ. ಕೆಲವು ಉತ್ತರ ಪತ್ರಿಕೆಗಳನ್ನು ತಿದ್ದಿರುವುದು (Tampering) ತನಿಖಾ ವರದಿಯಿಂದ ತಿಳಿದು ಬಂದಿರುತ್ತದೆ.

ಶ್ರೀ ಎಸ್.ಎಸ್.ಹಿರೇಮಠ, ಉಪನ್ಯಾಸಕರು, ವಿಜ್ಞಾನ ವಿಭಾಗ, ಕೆ.ಎಲ್.ಇ ಪಾಲಿಟೆಕ್ನಿಕ್, ಮಹಾಲಿಂಗಪುರ, ಇವರು ಉತ್ತರ ಪತ್ರಿಕೆಗಳನ್ನು ಸಮರ್ಪಕವಾಗಿ ಮೌಲ್ಯಮಾಪನ ಮಾಡದೆ, Erratic ಮತ್ತು ನಿರ್ಲಕ್ಷ್ಯತೆಯಿಂದ ಕರ್ತವ್ಯಲೋಪ ಎಸಗಿ ಈ ಪ್ರಕರಣಕ್ಕೆ ಕಾರಣೀಭೂತರಾಗಿದ್ದು, ಮೌಲ್ಯಮಾಪನದಲ್ಲಿ ದೋಷಪೂರಿತವಾಗಿ ಮನಸೋ ಇಚ್ಛೆ ಅಂಕ ನೀಡಿರುವುದು ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರಕವಾಗಿರುತ್ತದೆ. ಆದ್ದರಿಂದ ಕರ್ನಾಟಕ ಶಿಕ್ಷಣ ಅಧಿನಿಯಮ 1983ರ ಪ್ರಕಾರ ಶ್ರೀ ಎಸ್.ಎಸ್. ಹಿರೇಮಠ, ಉಪನ್ಯಾಸಕರು, ವಿಜ್ಞಾನ ವಿಭಾಗ, ಕೆ.ಎಲ್.ಇ. ಪಾಲಿಟೆಕ್ನಿಕ್, ಮಹಾಲಿಂಗಪುರ ಇವರನ್ನು ಸೇವೆಯಿಂದ ವಜಾಗೊಳಿಸಿ, ಕೂಡಲೇ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ.

ತಮ್ಮ ನಂಬುಗೆಯ,

ನಿರ್ದೇಶಕರು

**ಪ್ರತಿ: ಮಾಹಿತಿಗಾಗಿ.**

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ಕೊಠಡಿ ಸಂ: 252, 2ನೇ ಮಹಡಿ, ವಿಧಾನಸೌಧ, ಬೆಂಗಳೂರು
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, [ಉನ್ನತ ಶಿಕ್ಷಣ], ಬಹುಮಹಡಿಗಳ ಕಟ್ಟಡ, ಬೆಂಗಳೂರು-1.
3. ಪತ್ರಿಕಾ ಕಾರ್ಯದರ್ಶಿಗಳು, ಮಾನ್ಯ ಮುಖ್ಯಮಂತ್ರಿಯವರ ಕಾರ್ಯಾಲಯ, ವಿಧಾನಸೌಧ, ಬೆಂಗಳೂರು.
4. ಕಾರ್ಯದರ್ಶಿಗಳು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು
5. ನಿರ್ದೇಶಕರ ಆಪ್ತಶಾಖೆಗೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
6. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ಕಛೇರಿ ಪ್ರತಿ.